

ಮತ್ತು ಅರ್ಜಿ ಹಾಕದೆಯೂ 'ಅವಕಾಶ ಪಡೆಯುವ' ಸ್ಥಳೀಯ, ಜಾನಪದ ಕಲಾವಿದರ ದಸರಾದಲ್ಲಿ ಸಂಕಟವೇ ಹೆಚ್ಚು. ಕಾರ್ಯಕ್ರಮ ನೀಡುವ ಅವಕಾಶಕ್ಕಾಗಿ ಅವರೆಲ್ಲ ಗೊತ್ತಿರುವ ಅಧಿಕಾರಿಗಳು, ಜನಪ್ರತಿನಿಧಿಗಳು, ಪತ್ರಕರ್ತರು ಸೇರಿದಂತೆ ಪ್ರಭಾವಿಗಳ ಬೆನ್ನುಬೀಳುತ್ತಾರೆ. ಅದೇ ದಸರೆಗೆ ಅವರು ನಡೆಸುವ ಸಿದ್ಧತೆ. ಅದು ಹೊರಗೆಲ್ಲೂ ಕಾಣುವುದಿಲ್ಲ. ಆಯ್ಕೆಯಾದ ಮೇಲೂ ಅವರಿಗೆ ಅಂಥ ಉಪಚಾರವೇನೋ ದೊರಕುವುದಿಲ್ಲ. ಸಮಯಕ್ಕೆ ಸರಿಯಾಗಿ ಊಟ ಸಿಕ್ಕರೆ ಅದೇ ಅದೃಷ್ಟ.

ಬಹುಭಾಷಾ ಕವಿಗೋಷ್ಠಿಯ ದಿನವೇ ಬಂದು, ಹಳೆಯ, ಹೊಸ ಕವಿತೆ ಓದಿ ಅಂದೇ ತಮ್ಮೂರಿಗೆ ಹಿಂತಿರುಗುವ ಕವಿಗಳ ದಸರಾದಲ್ಲಿ ಕಾವ್ಯ ಸ್ಫೂರ್ತಿಗೆ ಬಹುತೇಕ ಅವಕಾಶವೇ ಇಲ್ಲ. ಹೀಗಾಗಿ ಕಾವ್ಯಾಸ್ವಾದನೆಯ ಅವಕಾಶವೂ ಕಡಿಮೆಯೇ. ದಸರಾ ಕವಿಗೋಷ್ಠಿಗಳ ಘನತೆ ಕಡಿಮೆಯಾಗಿದೆ ಎಂಬ ದೂರಿಗೂ ಪರಿಹಾರ ಸಿಕ್ಕಿಲ್ಲ. ಅವರಂತೆಯೇ ಬಂದು, ಐಷಾರಾಮಿ ಹೋಟೆಲುಗಳಲ್ಲಿ ಉಳಿದುಕೊಂಡು ಹೋಗುವ ಪ್ರಖ್ಯಾತ ಕಲಾವಿದರ ಸಂಗೀತ, ನೃತ್ಯದಲ್ಲಿ ಸ್ಫೂರ್ತಿಯ ಕೊರತೆ ಇರುವುದಿಲ್ಲ. ಸ್ಥಳೀಯ ಕಲಾವಿದರಲ್ಲಿ ಸ್ಫೂರ್ತಿ, ಉತ್ಸಾಹಗಳಿದ್ದರೂ ಸೌಕರ್ಯಗಳ ಕೊರತೆಯಲ್ಲಿ ಬಳಲುತ್ತವೆ. ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಬರುವ ವಿವಿಧ ಜಿಲ್ಲೆಗಳ ಕಲಾವಿದರ ಉತ್ಸಾಹವು ಜಂಬೂಸವಾರಿ ಮೆರವಣಿಗೆಯ ಆಕರ್ಷಣೆಯನ್ನು ಹೆಚ್ಚಿಸಿದರೂ, ಅವರ ಗೌರವ ಧನ ಹೆಚ್ಚಾಗುವುದಿಲ್ಲ.

ಸದಾ ಮೌನಹೊದ್ದು ಮಲಗುವ ಮಾನಸಗಂಗೋತ್ರಿಯ ಬಯಲು ರಂಗಮಂದಿರ ಯುವ ದಸರಾ ಸಂಭ್ರಮದಲ್ಲಷ್ಟೇ ಹುಚ್ಚೆದ್ದು ಕುಣಿಯುತ್ತದೆ. ದಸರಾದಲ್ಲಿ ಗಂಗೋತ್ರಿ ಎಂದರೆ ಅಷ್ಟೇ. ಉತ್ಸವದೊಂದಿಗೇ ಬೆಳೆದು ಬಂದ, ಪೈಲ್ವಾನರ ಹಬ್ಬವಾದ ಕುಸ್ತಿ ಪಂದ್ಯಾವಳಿಗೂ ಈಗ ಮಂಕು ಕವಿದಿದೆ. 1955ರವರೆಗೂ ಅರಮನೆ ಆವರಣದಲ್ಲೇ ನಡೆಯುತ್ತಿದ್ದ ಪಂದ್ಯಾವಳಿಗಳು, ಈಗ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದ ದೇವರಾಜ ಅರಸು ಕ್ರೀಡಾಂಗಣಕ್ಕೆ ಸ್ಥಳಾಂತರಗೊಂಡಿದೆ. ಉತ್ಸವದಲ್ಲಿ ಭಾಗವಹಿಸಲೆಂದೇ ವರ್ಷವಿಡೀ ತಾಲೀಮು ನಡೆಸುತ್ತಿದ್ದ ದಿನಗಳೂ ಈಗ ಇಲ್ಲ.

ಪೊಲೀಸ್ ಬ್ಯಾಂಡ್‌ನಲ್ಲಿ ಎಂದಿನಂತೆ ಸಿಬ್ಬಂದಿ ಕೊರತೆ ಇದ್ದರೂ ಮಾಧುರ್ಯಕ್ಕೆ ಕೊರತೆ ಇಲ್ಲ. ಅದು ಪರಂಪರೆಯನ್ನು ಬಿಟ್ಟುಕೊಟ್ಟಿಲ್ಲ. ಚಲನಚಿತ್ರೋತ್ಸವದಲ್ಲಿ ಹಳೆ–ಹೊಸ ಚಿತ್ರಗಳ ಸಮ್ಮಿಲನ. ಸಂಪ್ರದಾಯಸ್ಥ ಕುಟುಂಬಗಳಲ್ಲಿ ಗೊಂಬೆ ಕೂರಿಸುವ ಸಂಭ್ರಮ ತಿಂಗಳ ಮೊದಲೇ ಶುರುವಾಗುತ್ತದೆ. ಟ್ರಂಕಿನಲ್ಲಿಟ್ಟ ಹಳೇ ಗೊಂಬೆಗಳನ್ನು ತೆಗೆದು, ಒರೆಸಿ, ತೊಳೆದು ಬೆಳಗಿ ಇಡುವ ಭಾಗ್ಯಕ್ಕೆ ಕೆಲವರಷ್ಟೇ ಪಾತ್ರರು. ಉಳಿದವರದ್ದು, ಹೊಸ ಗೊಂಬೆಗಳ ಸೆಟ್ ಅನ್ನು ಖರೀದಿಸಿ ತಂದಿಡುವ ಕಾರ್ಯ. ಪುರಾಣ, ಚರಿತ್ರೆಯ ಕಥನಗಳನ್ನು ಬಿಂಬಿಸುವ ಗೊಂಬೆಗಳ ಪ್ರದರ್ಶನದ ಜೊತೆಗೆ, ಹೊಸ ಕಾಲ, ಸನ್ನಿವೇಶಗಳನ್ನು ಕಣ್ಮುಂದೆ ತರುವ ಗೊಂಬೆಗಳ ಸಮೂಹವೂ ದಸರೆಗೆ ಆಧುನಿಕತೆಯ ಸ್ಪರ್ಶವನ್ನು ನೀಡಿದೆ. ಆದರೂ ಕಣ್ಣುಗಳು ಮತ್ತೆ ಮತ್ತೆ ರಾಜ–ರಾಣಿ, ಮಂತ್ರಿ, ಕಾಲಾಳು, ಅಶ್ವಾರೋಹಿ ಪಡೆ, ಗಜಪಡೆ, ಜಂಬೂಸವಾರಿಯ ಗೊಂಬೆಗಳತ್ತಲೇ ನೋಡುತ್ತವೆ!

ಅರಮನೆಯಲ್ಲಿ ಹಳೇ ಬಲ್ಬ್‌ಗಳ ಜಾಗದಲ್ಲಿ ಹೊಸ ಬಲ್ಬ್‌ಗಳು. ಮಾಸಿದ, ಸೋರುವ ಅರಮನೆಗೆ ಹೊದಿಸುವ ಬಂಗಾರದ ಬಣ್ಣ–ಬೆಳಕು. ಮುಂಭಾಗದಲ್ಲಿ ಫಲಪುಷ್ಪ ಪ್ರದರ್ಶನ. ಜಂಬೂ ಸವಾರಿಯ ದಿನ ಅರಮನೆ ಆವರಣದಲ್ಲಿ ಜನವೋ ಜನ. ಚಾಮುಂಡೇಶ್ವರಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಅಂಬಾರಿಯನ್ನು ಹೊತ್ತ ಗಜಪಡೆಯ ಘನ ಗಾಂಭೀರ್ಯದ ನಡಿಗೆ. ಮುಗಿದ ಬಳಿಕ ಬನ್ನಿಮಂಟಪದಲ್ಲಿ ಪಂಜಿನ ಕವಾಯತು. ಇದು ಪ್ರತಿ ವರ್ಷದ ದಸರೆಯ ಚಹರೆ. ಹೆಚ್ಚಿನ ಬದಲಾವಣೆಯನ್ನು ನಿರೀಕ್ಷಿಸುವಂತಿಲ್ಲ.

ಈ ಬಾರಿಯ ಸೇರ್ಪಡೆ ಎಂದರೆ 'ಯೋಗ ದಸರಾ' ಅದಕ್ಕೆ ಯೋಗಪಟುಗಳನ್ನಷ್ಟೇ ಅಲ್ಲದೆ, ಯೋಗಾಸಕ್ತರಾಗಿರುವ ಸಾವಿರಾರು

ಮೈಸೂರು ದಸರೆಯಲ್ಲಿ ಕುದುರೆಗಾಡಿಯೂ ಒಂದು ವಿಶೇಷ ಆಕರ್ಷಣೆ

